ಅವ ನೋಡು, ಎಲ್ಲಾ ಒದ್ದೆಯಾಗಿದ್ದಾನೆ. ಅದಲ್ಲದೆ ಲ್ಯಾಪ್‌ಟಾಪ್‌ಗೆ ನೀರು ಬಿದ್ದಿದೆ ಪಾಪ...' ಎನ್ನುತ್ತಾ ಒಳಗೆ ಹೋಗಿ ಒಂದು ಟೈರಾಸು ತಂದು ಸಂಜಯನ ಕೈಗೆ ಕೊಟ್ಟರು.

ಸಂಜಯ್ ಲ್ಯಾಪ್‌ಟಾಪ್‌ನ್ನೂ ತಲೆಯನ್ನೂ ಚೆನ್ನಾಗಿ ಒರೆಸಿದ. ಆಶಾ ನಗುತ್ತಾ 'ಲ್ಯಾಪ್‌ಟಾಪ್‌ಗಿಂತ ನಿಮ್ಮ ತಲೆ ಸರಿಯಾಗಿ ಒರೆಸಿಕೊಳ್ಳಿ. ಲ್ಯಾಪ್‌ಟಾಪ್ ಹಾಳಾದರೆ ತೊಂದರೆಯಿಲ್ಲ, ನಮ್ಮ ಕಪ್ಪೆ ಉಂಟು. ಆದರೆ ತಲೆ ಹಾಳಾದರೆ ಕಷ್ಟ' ಅಂದಳು.

ಸೀತಮ್ಮ 'ಬಿಡೇ, ಸುಮ್ಮನಿರೇ ಸ್ವಲ್ಪ...' ಎನ್ನುತ್ತಾ 'ಅಂದಹಾಗೆ ಸಂಜಯ್, ನೀನು ಇದರಲ್ಲಿ ಏನ್ ಮಾಡ್ತೀಯಪ್ಪ?' ಕೇಳಿದರು.

ಆಶಾಳ ನಗೆಯಿಂದ ಅವಮಾನಿತನಾಗಿದ್ದ ಸಂಜಯ್ 'ಅದು ಏನು ಎಂದು ಆಮೇಲೆ ಹೇಳ್ತೇನೆ. ಮೊದಲಿಗೆ ಈ ಆಶಾ ಮಳೆಯ ವಿಚಾರ ಆ ಕಪ್ಪೆಗೆ ಹೇಗೆ ಗೊತ್ತಾಯ್ತು ಅಂತ ಹೇಳಲಿ' ಅಂದ. ಸೀತಮ್ಮ ಇಬ್ಬರಿಗೂ ರಾಜಿ ಮಾಡಿಸುತ್ತ, 'ಅವಳನ್ನು ಬಿಡೋ ಸಂಜಯ್, ಹುಡುಗಾಟಿಕೆ. ಅವಳಿಗೇನು ಗೊತ್ತಿದೆ ಬಿಡು. ನಾವು ಶಾಸ್ತ್ರಿಗಳನ್ನೇ ಕೇಳುವ' ಅಂದರು.

ಆವರೆಗೆ ಶಾಸ್ತ್ರಿಗಳು ಇದೆಲ್ಲವನ್ನೂ ನೋಡಿಕೊಂಡು ಸುಮ್ಮನೆ ಕುಳಿತಿದ್ದರು. ಅದಕ್ಕೇ ಸೀತಮ್ಮನ ಉದ್ದೇಶ ಅವರನ್ನೂ ಮಾತಾಡಿಸುವುದೇ ಆಗಿತ್ತು. ಶಾಸ್ತ್ರಿಗಳು ತಮ್ಮ ಗಾಂಭೀರ್ಯವನ್ನು ಬಿಟ್ಟು 'ಕಪ್ಪೆಗೆ ಆಶಾಳೇ ಹೇಳಿರ್ಬೇಕು' ಅಂತ ಹೇಳಿದರು.

ಆಶಾ 'ಅಜ್ಜಾ' ಎನ್ನುತ್ತಾ ಅಜ್ಜನ ಕುತ್ತಿಗೆ ಸುತ್ತ ಕೈಹಾಕಿದಳು. ಸಂಜಯ್ ಸ್ವಲ್ಪ ಗಂಭೀರನಾದ. 'ಹೇಳಿದ ಹಾಗೆ ಶಾಸ್ತ್ರಿಗಳೇ, ಈ ಕಪ್ಪೆಗೆ ಆಕಾಶದಲ್ಲಿ ಇರುವ ಮೋಡವಾಗಲೀ, ಮಳೆ ಬರುವ ವಿಷಯವಾಗಲೀ ಹೇಗೆ ಗೊತ್ತಾಗ್ತದೆ?' ಅಂದ.

ಶಾಸ್ತ್ರಿಗಳೂ ಮತ್ತೆ ಗಂಭೀರವಾದರು. 'ನೋಡು ಸಂಜಯ್, ಈ ಪ್ರಕೃತಿಯಲ್ಲಿ ಇರುವ ಪ್ರತೀ ಜೀವಿಗೂ ಮತ್ತು ಇನ್ನೊಂದು ಜೀವಿಗೂ ಹಾಗೇ ವಾತಾವರಣಕ್ಕೂ ಅಂತರ್ ಸಂಬಂಧ ಇದೆ. ನಾವು ನಮ್ಮ ತಾರ್ಕಿಕ ಬುದ್ಧಿಯಿಂದಾಗಿ ಎಲ್ಲವನ್ನೂ ಪ್ರಶ್ನಿಸುತ್ತಾ ಈ ಭೂಮಿ ಅಥವಾ ಪ್ರಕೃತಿಯಿಂದ ದೂರವಾಗಿದ್ದೇವೆ. ನಮಗೆ ನಮ್ಮ ತರ್ಕಕ್ಕೆ ಸಿಕ್ಕಿದ್ದು ಮಾತ್ರ ಸರಿ. ಆದರೆ ಈ ಪ್ರಾಣಿಗಳು ಆ ತರಹ ಇಲ್ಲ. ಅವು ಇನ್ನೂ ಭೂಮಿಗೆ ಹಾಗೂ ಈ ಪ್ರಕೃತಿಗೆ ಅಂಟಿ ಕೂತಿವೆ. ಹಾಗಾಗಿ ಭೂಮಿಯಲ್ಲಾಗುವ ಬಹಳ ಸಣ್ಣ ಪರಿವರ್ತನೆ ಕೂಡ ಅವಕ್ಕೆ ಗೊತ್ತಾಗ್ತದೆ. ನಾವೂ ಎಲ್ಲಾ ತರ್ಕವನ್ನು ಬದಿಗಿಟ್ಟು ಪ್ರಕೃತಿಯನ್ನು ನಂಬಿ ಅಪ್ಪಿ ಹಿಡಿದು ಸೂಕ್ಷ್ಮವಾಗಿ ಪರಿಶೀಲಿಸಿದರೆ ನಮಗೂ ಪ್ರಕೃತಿಯಲ್ಲಾಗುವ ಬದಲಾವಣೆ ಗೊತ್ತಾಗ್ತದೆ. ಅದಕ್ಕೆ ನಾವೂ ಪ್ರಕೃತಿಯೂ ಒಂದೇ ಆಗಿರಬೇಕು ಎನ್ನುವುದು! ನಾವು ಪ್ರಕೃತಿಯಿಂದ ಬೇರೆಯಾಗಿ ನಿಂತರೆ ಗೊತ್ತಾಗುವುದಿಲ್ಲ' ಅಂದರು.

ಸಂಜಯನಿಗೆ ಇದು ಯಾವುದೂ ಅರ್ಥ ಆಗಲಿಲ್ಲ. ಶಾಸ್ತ್ರಿಗಳು ಯಾವಾಗಲೂ ಪ್ರಶ್ನೆ ಮಾಡಿದವರಲ್ಲ. ಇವತ್ತು ತಮ್ಮ ಮೊಮ್ಮಗಳ ಮಾತು ಅವರಿಗೂ ಖುಷಿ ಕೊಟ್ಟಿತ್ತು. ಆದ್ದರಿಂದಲೇ ಅವರು, 'ಅಲ್ಲ ಸಂಜಯ್, ನೀನು ಈ ಮಷೀನ್‌ನಲ್ಲಿ ಅದೆಂತದ್ದನ್ನು ನೋಡಿ ಮಳೆ ಬರುವುದಿಲ್ಲ ಅಂತ ಹೇಳಿದಿ?' ಅಂತ ಕೇಳಿದರು.

ಸಂಜಯನಿಗೆ ಎಲ್ಲಿಂದ ಶುರು ಮಾಡ್ಬೇಕು ಅಂತ ಗೊತ್ತಾಗ್ಲಿಲ್ಲ. 'ಶಾಸ್ತ್ರಿಗಳೇ, ಇದು ಒಂದು ಕಂಪ್ಯೂಟರ್, ಇದರ ಮೂಲಕ ನಾನು ಇಂಟರ್ನೆಟ್ ನೋಡ್ತೇನೆ. ಇಂಟರ್ನೆಟ್‌ನಲ್ಲಿ ಎಲ್ಲಾ ವಿಷಯ ಇರ್ತದೆ. ಮಳೆ, ಹವಾಮಾನ, ಹಣ, ಔಷಧ, ಶಾಲೆ, ಅಂಗಡಿ... ಏನೆಲ್ಲ ನೀವು ಊರಲ್ಲಿ ನೋಡ್ತಿರೋ ಅದೆಲ್ಲ ಇಂಟರ್ನೆಟ್‌ನಲ್ಲಿ ಇದೆ. ಇಲ್ಲಿ ಇಂಟರ್ನೆಟ್ ಸಿಗುವುದಿಲ್ಲ... ಆ ಗುಡ್ಡೆಗೆ ಹೋದರೆ ಅಲ್ಲಿ ನೆಟ್ವರ್ಕ್ ಸಿಗ್ತದೆ. ಅದಕ್ಕೇ ಪ್ರತೀದಿನ ಗುಡ್ಡೆಗೆ ಹೋಗ್ತಿದ್ದದ್ದು' ಅಂದ.

ಶಾಸ್ತ್ರಿಗಳಿಗೆ ಬಹಳ ಆಶ್ಚರ್ಯ ಆಯಿತು. ಇಷ್ಟು ಸಣ್ಣ ಮಷೀನ್‌ನಲ್ಲಿ ಸಂಜಯ್ ಹೇಳುವ ಎಲ್ಲಾ ವಿಷಯ ಸಿಗುವುದು ದೊಡ್ಡ ಚಮತ್ಕಾರವೇ ಸರಿ ಅಂದುಕೊಂಡರು. ಈವರೆಗೆ ಅವರು ಸಂಜಯನ ಹತ್ತಿರ ಅವನ ಕೆಲಸದ ವಿಷಯ ಕೇಳಿದವರಲ್ಲ.

'ಸಂಜಯ್, ಅಂದಹಾಗೆ ನೀನು ಪ್ರತೀದಿನ ಗುಡ್ಡಕ್ಕೆ ಹೋಗುತ್ತಿದ್ದಿಯಲ್ಲ? ಏನು ಮಾಡ್ತಿದ್ದಿ ಅಲ್ಲಿ? ಈ ಮಷೀನ್‌ನಲ್ಲಿ ಎಲ್ಲಾ ವಿಷಯ ಸಿಗ್ತದೆ ಅಂತ ಹೇಳಿದೆ. ನಿನ್ನ ಕೆಲಸ ಏನು? ನೀನು ಮಾಸ್ತರಾ? ಡಾಕ್ಟರಾ? ಅಥವಾ ಬ್ಯಾಂಕಿನಲ್ಲಿ ಇದ್ದೀಯಾ? ನಿನ್ನ ಕೆಲಸ ಎಂತದ್ದು ಮಾರಾಯ?'

ಸಂಜಯ್ ತನ್ನ ವಿವರ ಹೇಳತೊಡಗಿದ. ತಾನು ಸೋಶಿಯಲ್ ಮೀಡಿಯಾ ಸ್ಟಾರ್ ಅಂತಲೂ ತನ್ನನ್ನು ಲಕ್ಷಾಂತರ ಮಂದಿ ನೋಡಿ ಅನುಕರಿಸುತ್ತಾರೆಂದೂ ಅದರಿಂದ ಹೊಸ ಬಿಸಿನೆಸ್ ಮಾಡುವುದಾಗಿಯೂ ಹೇಳಿದ. ಹಾಗೇ ಸೀತಾಪುರಕ್ಕೆ ಬರುವ ಮೊದಲು ತಾನು ದಕ್ಷಿಣ ಅಮೆರಿಕಕ್ಕೆ, ಆಫ್ರಿಕಾಕ್ಕೆ ಹೋದ ಅನುಭವ, ಅಲ್ಲಿ ತಂದ ಪರಿವರ್ತನೆ ಇತ್ಯಾದಿ ಹೇಳಿದ.

'ಸಂಜಯ್, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಅಂತ ಹೇಳ್ತಾರಲ್ಲ ಹಾಗೆ... ನೀನೂ ಇದ್ದೀಯ! ಬಹಳ ಸಂತೋಷ ಆಯಿತು. ನಮ್ಮ ಕಾರಂತರ ಹುಡುಗ ಇಡೀ ಜಗತ್ತಿಗೆ ಪ್ರಸಿದ್ಧ ಅಂದರೆ ಅದು ನಮಗೆ ಹೆಮ್ಮೆ!?' ಅಂದರು.

ಸೀತಮ್ಮ ಹಾಗೂ ಆಶಾ ಇದನ್ನೆಲ್ಲಾ ಕಥೆಯ ತರಹ ಕೇಳಿದ್ದರು. ಸಂಜಯ್ ಈವರೆಗೆ ಆಶಾಳ ಜೊತೆ ಬಹಳ ಗಂಭೀರವಾಗಿ ವ್ಯವಹರಿಸುತ್ತಿದ್ದ. ಸಮಯ ಸಿಕ್ಕಿದಾಗೆಲ್ಲ ಲ್ಯಾಪ್‌ಟಾಪ್ ಬಿಡಿಸಿ ಕೆಲಸ ಮಾಡುತ್ತಿದ್ದ. ಆಶಾ ಇದನ್ನೆಲ್ಲವನ್ನೂ ತಮಾಷೆಯಾಗಿ ತೆಗೆದುಕೊಂಡು ಮಾತನಾಡುತ್ತಿದ್ದಳು. ಆಶಾಳಿಗೆ ತಾನು ಸಂಜಯನಿಗೆ ತಮಾಷೆ ಮಾಡಿ ತಪ್ಪು ಮಾಡಿದೆನೋ ಅಂತ ಕಂಡಿತು. ಸಾಮಾನ್ಯ ವ್ಯಕ್ತಿಯಾಗಿದ್ದ ಸಂಜಯ್ ಒಮ್ಮೆಗೇ ದೊಡ್ಡ ವ್ಯಕ್ತಿಯಾಗಿ ತನ್ನೆದುರು ನಿಂತಂತೆ ಕಂಡಿತು.

ಸಂಜಯ್ ಹಾಗೇ ಮುಂದುವರಿಸಿ, ತಾನು ಶೆಟ್ಟರನ್ನು ಭೇಟಿಯಾದದ್ದೂ ಶೆಟ್ಟರು ಮತ್ತೆ ಆನಂದಣ್ಣನ ಜೊತೆ ಊರೆಲ್ಲ ಸುತ್ತಿದ್ದೂ ಸೀತಾಪುರದಲ್ಲಿ ತಾನು ತರಬೇಕೆಂದುಕೊಂಡಿರುವ ಪರಿವರ್ತನೆಯನ್ನೂ ಹೇಳಿದ. ಎಲ್ಲಾ ಕಥೆ ಕೇಳಿ ಶಾಸ್ತ್ರಿಗಳು ಸುಮ್ಮನಾದರು.

'ನೋಡಪ್ಪ ಸಂಜಯ್, ನಿನ್ನ ಅಪ್ಪನಿಗೂ ಈ ಊರನ್ನು ಉದ್ಧಾರ ಮಾಡಬೇಕೆಂದಿತ್ತು. ಕೊನೆಗೆ ಏನೆಲ್ಲಾ ಆಯ್ತು. ನಿನಗೆ ಗೊತ್ತಲ್ಲ?' ಅಂದರು.

ಮತ್ತೆ ಮುಂದುವರಿಸಿ, 'ನನ್ನ ದೃಷ್ಟಿಯಲ್ಲಿ ನೀನು ಮಾಡಹೊರಟದ್ದು ಸರಿಯಲ್ಲ. ಮನುಷ್ಯನಾದವನು ನೆಮ್ಮದಿಯಾಗಿ ಬದುಕಿ ಬಾಳಲಿಕ್ಕೆ ನೀನು ಹೇಳುವುದು ಯಾವುದೂ ಬೇಕಾಗಿಲ್ಲ. ತನ್ನ ಅಗತ್ಯಕ್ಕಿಂತ ಜಾಸ್ತಿ ಗಳಿಸುವುದು, ಕೂಡಿಡುವುದು, ಅದಕ್ಕಾಗಿ ಈ ಪ್ರಕೃತಿ ಕಾಡು ನದಿ ನೀರು ಗಾಳಿಯನ್ನು ದೋಚುವುದು ಅಗತ್ಯ ಇಲ್ಲ. ನಮ್ಮೂರಲ್ಲಿ ಯಾರನ್ನೂ ಮಾತಾಡಿಸು. ಅವರು ನೆಮ್ಮದಿಯಿಂದ ಸಂತೋಷದಿಂದ ನಾಳೆಯ ಬಗ್ಗೆ ಹೆಚ್ಚು ಆಲೋಚಿಸದೆ, ನಿನ್ನೆಯ ಬಗ್ಗೆ ಚಿಂತಿಸದೆ ಬದುಕುತ್ತಿದ್ದಾರೆ' ಅಂದರು.

'ಅವರು ಹೊರಗಿನ ಪ್ರಪಂಚ ನೋಡಿಲ್ಲ ಶಾಸ್ತ್ರಿಗಳೇ, ಅದಕ್ಕೇ ಬಾವಿಯಲ್ಲಿರುವ ಕಪ್ಪೆಯ ಹಾಗೆ ತನ್ನ ಬಾವಿಯೇ ದೊಡ್ಡದು ಅನ್ನುತ್ತಾ ಬದುಕುತ್ತಿದ್ದಾರೆ. ಒಮ್ಮೆ ಅವರು ಹೊರಗಿನ ಪ್ರಪಂಚ ನೋಡಲಿ ನೋಡುವ. ಮತ್ತೆ ಅವರಿಗೆ ಎಲ್ಲಾ ಬೇಕಾಗ್ತದೆ' ಅಂದ ಸಂಜಯ್.

ಸಂಜಯ್ ಮತ್ತೆ ಮುಂದುವರಿಸಿದ.

'ನಿಮ್ಮನ್ನೇ ನೋಡಿ. ನೀವು ಕೊಟ್ಟ ಔಷಧದಲ್ಲಿ ನನ್ನ ಕಾಯಿಲೆ ಒಂದೇ ವಾರದಲ್ಲಿ ಗುಣವಾಯ್ತು. ಇದನ್ನು ನಾನು ಇಂಟರ್ನೆಟ್‌ಗೆ ಹಾಕಿದರೆ ನಾಳೆ ನೀವು ಬಹಳ ಪ್ರಸಿದ್ಧರಾಗ್ತೀರಿ. ನೂರಾರು ಜನ ನಿಮ್ಮನ್ನು ನೋಡ್ಲಿಕ್ಕೆ, ನಿಮ್ಮ ಮದ್ದು ತೆಗೊಳ್ಳಿಕ್ಕೆ ಬರ್ತಾರೆ. ನಿಮಗೆ ಬಹಳ ಹಣವೂ ಹೆಸರೂ ಬರ್ತದೆ' ಅಂದ.

'ನನಗೆ ಆ ಹಣವೂ ಹೆಸರೂ ಬೇಡ ಸಂಜಯ್' ಹೇಳಿದರು ಶಾಸ್ತ್ರಿಗಳು. 'ನಾನು ಔಷಧ ಕೊಡುವುದು ಹಣ ಮಾಡಲೂ ಅಲ್ಲ, ಹೆಸರು ಮಾಡಲೂ ಅಲ್ಲ. ನಾನು ಮದ್ದು ಕೊಡುವುದು ಜನರ ಕಾಯಿಲೆಗಳನ್ನು ಗುಣಮಾಡಲಿಕ್ಕೆ ಅಷ್ಟೇ' ಅಂದರು.

'ಯಾವ ವ್ಯಕ್ತಿಗೆ ತಾನು ಯಾಕಾಗಿ ಕೆಲಸ ಮಾಡ್ತೇನೆ ಅಂತ ಗೊತ್ತಿಲ್ಲದಿದ್ದರೆ ಅವನು ಏನನ್ನೋ ಮಾಡ್ತಾನೆ' ಎಂದು ಸೇರಿಸಿದರು.

'ಅಂದರೆ?' ಸಂಜಯ್ ಪ್ರಶ್ನಿಸಿದ.

'ನೋಡಪ್ಪ, ಪ್ರತೀ ಕೆಲಸಕ್ಕೆ ಅದರದ್ದೇ ಉದ್ದೇಶ ಇರುತ್ತದೆ. ಔಷಧ ಕೊಡುವ ಉದ್ದೇಶ ಕಾಯಿಲೆ ಗುಣ ಮಾಡುವುದು. ಹಣ ಮಾಡುವುದಾಗಲಿ, ಹೆಸರು ಮಾಡುವುದಾಗಲೀ ಅಲ್ಲ. ಗುಣ ಮಾಡುವ ಉದ್ದೇಶ ಬಿಟ್ಟು, ಹಣದ, ಹೆಸರಿನ ಹಿಂದೆ ಬಿದ್ದರೆ, ಔಷಧ ಕೊಡುವ ಬದಲಿಗೆ ನಾನು ಔಷಧದ ವ್ಯಾಪಾರ ಮಾಡ್ಲಿಕ್ಕೆ ಶುರು ಮಾಡಿದರೆ ಅದು ತಪ್ಪು. ಇದರಿಂದಾಗಿ ಔಷಧ ಕೊಡುವ ಮೂಲ ವಿಷಯವನ್ನೇ ಮರೆಯುವಂತಾಗುತ್ತದೆ. ಹೀಗೆ ಪ್ರತೀ ಕೆಲಸವನ್ನೂ ಹಣದ ದೃಷ್ಟಿಯಿಂದ ಹೆಸರಿನ ದೃಷ್ಟಿಯಿಂದ ನೋಡಿದರೆ ಅದರ ಮೂಲ ಉದ್ದೇಶವೇ ತಪ್ಪಿ ಹೋಗುತ್ತದೆ. ಸ್ವಲ್ಪ ಯೋಚಿಸು, ಎಲ್ಲಾ ಕೆಲಸದ ಉದ್ದೇಶವೂ ಹಣ ಮಾಡುವುದೇ ಆದರೆ ನಾವು ಶ್ರೀಮಂತರಾಗುವುದನ್ನು ಬಿಟ್ಟರೆ